**ದಿನಾಂಕಃ 09.05.2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಪಿ ಎಂ ವಕೀಲರಿಂದಃ**

ಮೆಡಿಕಲ್ ಬಿಲ್ಲುಗಳನ್ನು ಹಾಜರು ಪಡಿಸಿದ್ದು ಎದುರುದಾರರ ಪರ ವಕೀಲರು ಅವುಗಳನ್ನು ತಕರಾರಿಗೆ ಒಳಪಟ್ಟು ಗುರುತಿಸಲು ಹೇಳಿದ್ದರಿಂದ ಬಿಲ್ಲುಗಳನ್ನು ತಕರಾರಿಗೆ ಒಳಪಟ್ಟು ನಿಪಿ-20 ರಿಂದ 32

ಇನ್ ಪೇಷಂಟ್ ಬಿಲ್ಲನ್ನು ನಿಪಿ-33

ಡಿಸ್ಚಾರ್ಜ್ ಸಮ್ಮರಿಯನ್ನು ನಿಪಿ-34 ಎಂದು ಗುರುತಿಸಲಾಯಿತು.

**ಪಾಟೀ ಸವಾಲು 2 ನೇ ಎದುರುದಾರರ ಪರ ಶ್ರೀ ಎಸ್ ಎನ್ ಪಿ ವಕೀಲರಿಂದಃ**

ನಾನು ಹಿರಿಯೂರಿನಲ್ಲಿ ಹುಟ್ಟಿದಾಗಿನಿಂದಲೂ ವಾಸವಾಗಿದ್ದೇನೆ. ಅಪಘಾತ 25.08.2022 ರಂದು ತುಮಕೂರು ಹತ್ತಿರ ಎನ್ ಹೆಚ್ -4 ಸರ್ವಿಸ್ ರಸ್ತೆಯಲ್ಲಿ ಆಗಿರುತ್ತದೆ. ನಾನು ಅಪಘಾತವಾದಾಗ ಎನ್ ಹೆಚ್ -4 ರಸ್ತೆಯಿಂದ ಸರ್ವಿಸ್ ರಸ್ತೆ ದಾಟುತ್ತಿದ್ದೆ ಎಂದರೆ ಸರಿಯಲ್ಲ. ನಾನು ಸರ್ವಿಸ್ ರಸ್ತೆಯಲ್ಲಿ ಹೋಗುತ್ತಿದ್ದೆ. ಆಟೋ ರಿಕ್ಷಾ ನನ್ನ ಹಿಂದುಗಡೆಯಿಂದ ಬಂದಿದೆ. ಆಟೋ ರಿಕ್ಷಾ ಊರುಕೆರೆ ಗ್ರಾಮಕ್ಕೆ ಹೋಗುತ್ತಿತ್ತು. ಅಪಘಾತವಾದ ಸ್ಥಳ ತುಮಕೂರು ತಾಲೂಕಿಗೆ ಸೇರಿದೆ. ಆ ದಿನ ನನ್ನ ಜೊತೆ ನನ್ನ ಸ್ನೇಹಿತ ಶೇಖರ್ ಇದ್ದ. ಆಟೋ ನನ್ನ ಒಬ್ಬನಿಗೆ ಡಿಕ್ಕಿ ಪಡಿಸಿತು. ಅಪಘಾತವಾದ ಸ್ಥಳ ಟಾರ್ ರಸ್ತೆ. ಟಾರ್ ರಸ್ತೆ ಎಷ್ಟು ಅಗಲವಿದೆ ಎಂದು ನನಗೆ ಹೇಳಲು ಬರುವುದಿಲ್ಲ. ಟಾರ್ ರಸ್ತೆ ಪಕ್ಕದಲ್ಲಿ ಮಣ್ಣಿನ ರಸ್ತೆ ಇದೆ. ಮಣ್ಣಿನ ರಸ್ತೆ ಎಷ್ಟು ಅಗಲವಿದೆ ಎಂದು ನನಗೆ ಹೇಳಲು ಬರುವುದಿಲ್ಲ. ಅಪಘಾತವು ಎಡಭಾಗದಲ್ಲಿ ಮಣ್ಣಿನ ರಸ್ತೆಗೆ ತಾಗಿಕೊಂಡು ಆಗಿರುತ್ತದೆ.

ಕೆಎ 06 ಡಿ 9237 ಆಟೋದಿಂದ ಅಪಘಾತವಾಗಿದೆ . ಸದರಿ ಆಟೋ ಪ್ರಯಾಣಿಕರ ಆಟೋವಾಗಿರುತ್ತದೆ. ಅದರಲ್ಲಿ ಚಾಲಕನನ್ನು ಹೊರತು ಪಡಿಸಿ ಬೇರೆ ಯಾರು ಇದ್ದರು ಎಂದು ನಾನು ಗಮನಿಸಿಲ್ಲ. ದೂರನ್ನು ನನ್ನ ಸ್ನೇಹಿತ ಕೊಟ್ಟಿರುತ್ತಾರೆ. ಪೊಲೀಸರು ನನ್ನ ಹೇಳಿಕೆಯನ್ನು

ಆಸ್ಪತ್ರೆಯಲ್ಲಿ ಪಡೆದುಕೊಂಡಿರುತ್ತಾರೆ. ಪೊಲೀಸರು ಆಟೋ ಚಾಲಕನ ಮೇಲೆ ಕೇಸ್ ಹಾಕಿದ್ದಾರೆ. ಆಟೋ ಚಾಲಕನ ಹೆಸರು ಬಸವರಾಜ್ ಎಂದು ಗೊತ್ತಾಯಿತು. ಆಟೋ ಚಾಲನೆ ಮಾಡಲು ಆಟೋ ಚಾಲಕನಿಗೆ ಪರವಾನಿಗೆ ಇತ್ತೊ ಇಲ್ಲವವೋ ಎಂದು ನನಗೆ ಗೊತ್ತಿಲ್ಲ. ನಾನು ರಸ್ತೆ ದಾಟುವಾಗ ನನ್ನ ತಪ್ಪಿನಿಂದ ಆಪಘಾತವಾಗಿದೆ ಎಂದರೆ ಸರಿಯಲ್ಲ.

ನಾನು ತುಮಕೂರಿನ ಹೇಮಾವತಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ . ನನಗೆ ಚಿಕಿತ್ಸೆ ನೀಡಿದ ವೈದರ ಹೆಸರು ಪ್ರಸಾದ್ ಬಾಬು. ತುಮಕೂರಿನ ಆಸ್ಪತ್ರೆಯಲ್ಲಿ ಒಂದು ವಾರ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ. ಹಿರಿಯೂರಿನಲ್ಲಿ ಡಾ. ಶಿವಣ್ಣ ರೆಡ್ಡಿಯವರ ಬಳಿ ಚಿಕಿತ್ಸೆ ಪಡೆದಿದ್ದೇನೆ. ತುಮಕೂರಿನ ಹೇಮಾವತಿ ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಮತ್ತು ಡಾ.ಶಿವಣ್ಣ ರೆಡ್ಡಿಯವರ ಬಳಿ ಚಿಕಿತ್ಸೆ ಪಡೆಯುವ ಪೂರ್ವ ಎಲ್ಲಿಯೂ ಚಿಕಿತ್ಸೆ ಪಡೆದಿಲ್ಲ. ಅಪಘಾತದಿಂದ ನನ್ನ ಎಡ ಮತ್ತು ಬಲಗಾಲಿಗೆ ಪೆಟ್ಟುಗಳಾಗಿರುತ್ತದೆ. ವೈದ್ಯರು ನನ್ನ ಎರಡು ಕಾಲುಗಳಿಗೆ ಆಪರೇಷನ್ ಮಾಡಿರುತ್ತಾರೆ. ಹೇಮವತಿ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರ ಸುಮಾರು ಒಂದು ವರ್ಷಗಳ ನಂತರ ಡಾ. ಶಿವಣ್ಣ ರೆಡ್ಡಿಯವರ ಬಳಿ ಹೋಗಿದ್ದೆ. ಡಾ. ಶಿವಣ್ಣ ರೆಡ್ಡಿಯವರ ಬಳಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆಗಳನ್ನು ನೀಡಿದ್ದೇನೆ . ನಾನು ಡಾ.ಶಿವಣ್ಣ ರೆಡ್ಡಿಯವರಿಂದ ಯಾವುದೇ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಡಾ. ಶಿವಣ್ಣ ರೆಡ್ಡಿಯವರ ಬಳಿ ಕೇವಲ ಅಂಗನ್ಯೂನ್ಯತೆ ಪ್ರಮಾಣ ಪತ್ರ ಪಡೆಯಲು ಮಾತ್ರ ಹೋಗಿದ್ದೆ ಎಂದರೆ ಸರಿಯಲ್ಲ. ಅಂಗನ್ಯೂನ್ಯತೆ ಪ್ರಮಾಣ ಪತ್ರ ಪಡೆದ ನಂತರ ನೋವಾದಾಗ ಡಾ. ಶಿವಣ್ಣ ರೆಡ್ಡಿಯವರ ಬಳಿ ಹೋಗಿದ್ದೆ.

ಔಷದೋಪಚಾರಕ್ಕೆ ರೂ.5 ಲಕ್ಷ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೇಮವತಿ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ಪೂರ್ವದಲ್ಲಿ ಮತ್ತು ಆನಂತರ ಎಕ್ಸ್ ರೇ ತೆಗೆದಿರುತ್ತಾರೆ. ಆ ಎಕ್ಸ್ ರೇಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ಮೂಳೆ ಮುರಿತ ಉಂಟಾಗಿಲ್ಲ ಎಂದರೆ ಸರಿಯಲ್ಲ. ಹೇಮಾವತಿ

ಆಸ್ಪತ್ರೆಯಲ್ಲಿ ಯಾವುದೇ ಶಸ್ತ್ರ ಚಿಕಿತ್ಸೆ ಮಾಡಿಲ್ಲ ಎಂದರೆ ಸರಿಯಲ್ಲ. ವೈದ್ಯರೊಂದಿಗೆ ಮಿಲಾಪಿಯಾಗಿ ಸುಳ್ಳು ಅಂಗನ್ಯೂನ್ಯತೆ ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ನಾನು ಶ್ರೀ ಗುರುರಾಯ ಟ್ರೇಡರ್ಸ್ ಹೆಸರಲ್ಲಿ ಶೇಂಗಾ ವ್ಯಾಪಾರ ಮಾಡುತ್ತೇನೆ. ಶ್ರೀ ಗುರುರಾಯ ಟ್ರೇಡರ್ಸ್ ಗೆ ನಾನು ಒಬ್ಬನೇ ಮಾಲೀಕ. ಅಂದಾಜು 10 ವರ್ಷಗಳಿಂದ ನಾನು ಸದರಿ ಟ್ರೇಡರ್ಸ್ ನಡೆಸುತ್ತಿದ್ದೇನೆ. ಶೇಂಗಾವನ್ನು ಖರೀದಿ ಮಾಡಿ ಸಿಪ್ಪೇತೆಗೆದು ಸುಲಿದು ಶೇಂಗಾ ಬೀಜವನ್ನು ಮಾರಾಟ ಮಾಡುತ್ತೇನೆ. ಎಂ ಪಿ ಎಂ ಸಿ ಮಾರುಕಟ್ಟೆಯಲ್ಲಿ ಶೇಂಗಾ ಖರೀದಿ ಮಾಡುತ್ತೇನೆ. ಅವರು ಅದಕ್ಕೆ ರಸೀದಿ ಕೊಡುತ್ತಾರೆ ಎಂದರೆ ನಿಜ. ಶೇಂಗಾ ಬೀಜ ಮಾರಾಟ ಮಾಡಿದಾಗ ನಾನು ರಶೀದಿ ಕೊಡುತ್ತಿದೆ. ನಾನು ಶೇಂಗಾ ಮಾರಾಟ ಮಾಡಿದ ಕುರಿತು ಖರೀದಿ ಮಾಡಿದ ಕುರಿತು ಯಾವುದೇ ದಾಖಲೆ ಹಾಜರು ಪಡಿಸಿಲ್ಲ. ನನಗೆ ವ್ಯಾಟ್ ನಂಬರ್ ಇರುತ್ತದೆ . ಈಗ ಜಿ ಎಸ್ ಟಿ ನಂಬರ್ ಇದೆ. ನಮ್ಮ ಟ್ರೇಡರ್ಸ್ ನಲ್ಲಿ ಸುಮಾರು 10 ಜನ ಕೆಲಸ ಮಾಡುತ್ತಾರೆ. ನಮ್ಮ ಟ್ರೇಡರ್ಸ್ ನಲ್ಲಿ ಮ್ಯಾನೇಜರ್ ಎಂದು ಯಾರು ಇರುವುದಿಲ್ಲ. 10 ಜನ ಕೂಲಿಗಳಾಗಿರುತ್ತಾರೆ. ಸೀಸನ್ ಬಂದಾಗ ಶೇಂಗಾ ಖರೀದಿಸಿ ನಂತರ ಬಿಡಿಸಿ ಮಾರಾಟ ಮಾಡುತ್ತೇನೆ. ನನ್ನ ಬಳಿ 10 ಜನ ಕೆಲಸ ಮಾಡುತ್ತಿದ್ದ ಬಗ್ಗೆ ಅವರಿಗೆ ಸಂಬಳ ನೀಡುತ್ತಿದ್ದ ಬಗ್ಗೆ ರಿಜಿಸ್ಟರ್ ಬರೆದಿರುತ್ತೇನೆ. ಬೇರೆ ಬೇರೆ ಕೆಲಸಗಾರರು ಬಂದು ಹೋಗುತ್ತಾರೆ . ಅವರ ಹೆಸರನಲ್ಲೇ ರಿಜಿಸ್ಟರ್ ನಲ್ಲಿ ಬರೆದಿರುತ್ತೇನೆ. ಅವರಿಗೆ ದಿನ ಸಂಬಳ ಕೊಡುತ್ತೇನೆ. ಅವರಿಗೆ ಬಡವಾಡಿ ಮಾಡಿದ ಕುರಿತು ರಿಜಿಸ್ಟರ್ ನಲ್ಲಿ ನಮೂದು ಮಾಡಿದ್ದೇನೆ. ಸಂಬಳ ಕೊಟ್ಟ ಕುರಿತು ಪುಸ್ತಕವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ.

ತಿಂಗಳಿಗೆ ರೂ.75 ಸಾವಿರ ಸಂಪಾದನೆ ಮಾಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ವ್ಯಾಪಾರ ಅಭಿವೃದ್ದಿ ಪಡಿ ರೂ.2 ಕೋಟಿ ವ್ಯಾಪಾರ ಮಾಡುತ್ತೇನೆ ಎಂಬ ಉದ್ದೇಶ ಹೊಂದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 2020-21 ರಿಂದ

ಆದಾಯ ತೆರಿಗೆ ರಿಟರ್ನ್ಸ್ ಹಾಜರು ಪಡಿಸಿದ್ದೇನೆ. ಅದರ ಹಿಂದಿನ ಆದಾಯ ತೆರಿಗೆ ರಿಟರ್ನ್ಸ್ ನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ಅವುಗಳನ್ನು ಅವಶ್ಯಕತೆ ಇದ್ದಲಿ ನ್ಯಾಯಾಲಯಕ್ಕೆ ಕೊಡಲು ಸಿದ್ದನಿದ್ದೇನೆ ಎಂದು ನುಡಿಯುತ್ತಾರೆ. ಸುಮಾರು 10 ವರ್ಷಗಳ ದಾಖಲೆಗಳನ್ನು ಕೊಡಲು ಸಿದ್ದನಿದ್ದೇನೆ.

2020-21 ರಲ್ಲಿ ಒಟ್ಟು ರೂ.5 ಲಕ್ಷ ಆದಾಯವಿತ್ತು. ಈ ವಿಚಾರನ್ನು ನಾನು ಆದಾಯ ತೆರಿಗೆ ಪಾವತಿಯಲ್ಲಿ ತೋರಿಸಿದ್ದೇನೆ. ನಾನು ವ್ಯವಹಾರ ಮಾಡಲು ಸಾಲ ಪಡೆದಿದ್ದೆ ಎಂದರೆ ನಿಜ. ನಾನು ರೂ.15 ಲಕ್ಷ ಹಣವನ್ನು ಹೆಚ್ ಡಿ ಎಫ್ ಸಿ ಬ್ಯಾಂಕ್ ನಿಂದ ಮತ್ತು ರೂ.15 ಲಕ್ಷ ಹಣವನ್ನು ಕೈ ಸಾಲ ಮಾಡಿದ್ದೇನೆ. ಸಾಲ ಪಡೆದು 5-6 ವರ್ಷಗಳಾಗಿರುತ್ತದೆ. ಆ ಸಾಲ ತೀರುವಳಿ ಆಗಿಲ್ಲ. ಬ್ಯಾಂಕ್ ನಿಂದ ಸಾಲ ಪಡೆದ ಬಗ್ಗೆ ಮತ್ತು ಸಾಲ ಬಾಕಿ ಇರುವ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ. ಸಾಲವನ್ನು ಪ್ರತಿ ತಿಂಗಳು ಕಟ್ಟಿದ್ದೇನೆ ಈ ಒಂದು ವರ್ಷದಿಂದ ಕಟ್ಟಿರುವುದಿಲ್ಲ. ನಾನು ಯಾವುದೇ ಶೇಂಗಾ ವ್ಯವಹಾರ ಮಾಡುತ್ತಿರಲಿಲ್ಲ . ನನಗೆ ಯಾವುದೇ ಆದಾಯ ವಿಲ್ಲದಿದ್ದರೂ ಸಹ ದಾಖಲೆಗಳನ್ನು ಸೃಷ್ಟಿಸಿ , ಸುಳ್ಳು ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ಹಾಜರು ಪಡಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಅಪಘಾತ ಪೂರ್ವದಲ್ಲಿ ಯಾವ ರೀತಿ ಇದ್ದೇನೋ ಈಗಲೂ ಸಹ ಅದೇ ರೀತಿ ಆರೋಗ್ಯವಾಗಿದ್ದೇನೆ ಎಂದರೆ ಸರಿಯಲ್ಲ. ನಾನು ತುಮಕೂರಿನಲ್ಲಿ ಯಾವೆದೇ ಪರಿಹಾರ ಕೋರಿ ಅರ್ಜಿ ಸಲ್ಲಿಸಿಲ್ಲ. ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು